# ‘ಕೃಷಿ ಜೀವನ ಕ್ರಮವೇ ನಶಿಸಿಹೋಗುತ್ತಿದೆ’

■ **ವಿಕ ಸುದ್ದಿಲೋಕ** ಬೆಂಗಳೂರು

**ಕಾರ್ಯಕ್ರಮ:** ಹಿರಿಯ ಪತ್ರಕರ್ತ ನಾಗೇಶ ಹೆಗಡೆ ಅವರ ಆರು ಪುಸ್ತಕಗಳ ಲೋಕಾರ್ಪಣೆ

**ಯಾವ ಪುಸ್ತಕ?:** ಭೂಮಿ ಬುಕ್ಸ್ ಪ್ರಕಟಿಸಿದ ‘ಅಭಿವೃದ್ಧಿಯ ಅಂಧಯುಗ’, ‘ಟಿಪ್ಪು ಖಡ್ಗದ ನ್ಯಾನೋ ಕಾರ್ಬನ್’, ‘ಕೊಪೇನ್‌ಹೇಗನ್ ಋತು ಸಂಹಾರ’ ಹಾಗೂ ಅಂಕಿತ ಪ್ರಕಾಶನದಿಂದ ಮರುಮುದ್ರಣ ಕಂಡ ‘ಪ್ರತಿದಿನ ಪರಿಸರ ದಿನ’, ‘ಇರುವುದೊಂದೇ ಭೂಮಿ’ ಮತ್ತು ‘ಸುರಿಹೊಂಡ ಭರತ ಖಂಡ’

**ಎಲ್ಲಿ? ಯಾವತ್ತು?:** ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್; ಭಾನುವಾರ

**ಯಾರಿದ್ದರು?:** ಕೆ.ವಿ.ಅಕ್ಷರ, ಪ್ರೊ.ಬಿ.ಕೆ.ಚಂದ್ರಶೇಖರ್, ನೇಮಿಚಂದ್ರ, ನಾಗೇಶ ಹೆಗಡೆ ಮತ್ತಿತರರು ಪಾಲ್ಗೊಂಡಿದ್ದರು.

## ಯಾರು ಏನೆಂದರು?

ಕರ್ನಾಟಕದ ಪರಿಸರ ವಲಯಕ್ಕೆ ಸಂಬಂಧಿಸಿದ ಇತಿಹಾಸ, ನಾಗೇಶ ಹೆಗಡೆ ಅವರ ಪುಸ್ತಕಗಳಲ್ಲಿ ಕಾಣಸಿಗುತ್ತದೆ. ಉಳಿದಂತೆ, ನಮ್ಮಲ್ಲಿ ಕೃಷಿಯ ಜೀವನ ಕ್ರಮವೇ ನಶಿಸಿಹೋಗುತ್ತಿದೆ. 10 ವರ್ಷಗಳ ನಂತರ ಕೃಷಿ ಕ್ಷೇತ್ರ ಇಂದಿನಷ್ಟು ಉಳಿಯುವುದೂ ಸಂಶಯ ಎಂಬ ವಾತಾವರಣ ಸೃಷ್ಟಿಯಾಗಿದೆ. ಇದಕ್ಕೆ ಪೂರಕ ಎಂಬಂತೆ ಸರಕಾರದ ನಾನಾ ಯೋಜನೆಗಳೂ ಕೃಷಿ ಕ್ಷೇತ್ರದ ವಿಸರ್ಜನೆಗೆ ಕಾರಣವಾಗುತ್ತಿವೆ. ಈ ಕುರಿತು ಮಾಧ್ಯಮಗಳು ಗಮನ ಚೆಲ್ಲಬೇಕು.

**-ಕೆ.ವಿ.ಅಕ್ಷರ**

ನಾಗೇಶ ಹೆಗಡೆ ಅವರ ಲೇಖನಗಳು ಎಚ್ಚರಿಕೆಯ ಗಂಟೆ ಇದ್ದಂತೆ. ಪ್ರಕೃತಿ, ಪರಿಸರ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದ ವಿಷಯ, ವಿವರಗಳನ್ನು ಅವರಷ್ಟು ಸರಳ/ಸೂಕ್ಷ್ಮವಾಗಿ ಕನ್ನಡದಲ್ಲಿ ಕಟ್ಟಿಕೊಡುವ ಲೇಖಕರು ವಿರಳ. ಜಾಗತಿಕ ಪರಿಸರ ಸಮಸ್ಯೆಯನ್ನು ವಿವರಿಸುತ್ತಲೇ, ಅದರ ಸಂವೇದಿಯಾಗಿ ಉತ್ತರ ಕರ್ನಾಟಕದಲ್ಲಿ ನಡೆಯುತ್ತಿರುವ ಪರಿಸರ ನಾಶದ ಬಗ್ಗೆಯೂ ನಮ್ಮ ಪ್ರಜ್ಞೆಯನ್ನು ಜಾಗೃತಗೊಳಿಸುವ ಶಕ್ತಿ ಅವರ ಬರಹಕ್ಕೆ ಇದೆ.

**-ನೇಮಿಚಂದ್ರ**

ಪರಿಸರ ಸಂರಕ್ಷಣೆ ವಿಚಾರಕ್ಕೆ ಬಂದರೆ ಇವತ್ತಿನ ರಾಜಕಾರಣಿಗಳು, ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳುವ ಕೆಲಸವನ್ನಷ್ಟೇ ಮಾಡುತ್ತಿದ್ದಾರೆ. ಮುಂದಿನ ಅಪಾಯ ಇಲ್ಲವೇ ಆತಂಕದ ಬಗ್ಗೆ ಇವರ್‍ಯಾರಿಗೂ ಆಲೋಚನೆ ಇಲ್ಲ. ಆದ್ದರಿಂದ ನಾವು ತುರ್ತಾಗಿ ಪರಿಸರ ರಕ್ಷಣೆ ಕುರಿತಂತೆ ಯಾವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂಬುದನ್ನು ನಿರ್ಧರಿಸಬೇಕು. ಜತೆಗೆ, ಪರಿಸರವನ್ನು ನಾವೆಷ್ಟು ಬಳಸಿಕೊಳ್ಳಬೇಕು ಎಂಬ ಬಗ್ಗೆಯೂ ಲಕ್ಷ್ಮಣರೇಖೆ ಹಾಕಿಕೊಳ್ಳಬೇಕು

**- ಪ್ರೊ.ಬಿ.ಕೆ.ಚಂದ್ರಶೇಖರ್**

### ಪ್ರತಿ ಪುಸ್ತಕಕ್ಕೊಂದು ಗಿಡ!

**ಪುಸ್ತಕ ಮುದ್ರಣ ಸಂದರ್ಭದಲ್ಲಿ ಕಾಗದದ ಬಳಕೆ ಮತ್ತು ಈ ಮೂಲಕ ಮರಗಳ ಮಾರಣಹೋಮ ನಡೆಯುವುದರಿಂದ, ಭೂಮಿ ಪ್ರಕಾಶನ ಹೊರತರುವ ಪ್ರತಿ ಪುಸ್ತಕಕ್ಕೆ ಬದಲು ಗಿಡವೊಂದನ್ನು ನೆಡುವ ಸಂಕಲ್ಪ ಮಾಡಿದ್ದೇವೆ. ತಿಪ್ಪಗೊಂಡನಹಳ್ಳಿ ಸಮೀಪದ ಸ್ಫೂರ್ತಿ ವನದಲ್ಲಿ ಗಿಡ ನೆಡಲಾಗುವುದು ಎಂದು ನಾಗೇಶ ಹೆಗಡೆ ಪ್ರಕಟಿಸಿದರು.**



**ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಭಾನುವಾರ ನಡೆದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ನಾಗೇಶ ಹೆಗಡೆ ಅವರಿಗೆ ಗಿಡ ನೀಡುವ ಮೂಲಕ ನೇಮಿಚಂದ್ರ ಶುಭ ಕೋರಿದರು. ಕೆ.ವಿ.ಅಕ್ಷರ, ಪ್ರೊ.ಬಿ.ಕೆ.ಚಂದ್ರಶೇಖರ್ ಉಪಸ್ಥಿತರಿದ್ದರು.**